# ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಬ್ಯಾಡಗಿ

## ಪಿ.ಸಿ.ಆರ್. ನಂಃ 70/ 2022

**ಪಿಡಬ್ಲ್ಯೂಃ** 1

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇಂಡಿಯನ್ ಬ್ಯಾಂಕ್ ಅಸೋಸಿಯನ್ ಕೇಸಿನಲ್ಲಿ ಮಾಡಿದ ಆದೇಶದಂತೆ ಸಾಕ್ಷಿಯ ಹೇಳಿಕೆಯ ಪ್ರಮಾಣ ಪತ್ರವನ್ನು ಸ್ವೀಕರಿಸಿ ಸಾಕ್ಷಿಯನ್ನು ಪಿ.ಡಬ್ಲ್ಯೂ.1 ಎಂದು ಪರಿಗಣಿಸಲಾಯಿತು.

ದಿನಾಂಕಃ 27.12.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ನನ್ನ ಸಾಕ್ಷಿ ಹೇಳಿಕೆಯನ್ನು ನಾನೇ ಮಾಹಿತಿ ನೀಡಿ ಬರೆಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದರಲ್ಲಿರುವ ಸಹಿಗಳು ನನ್ನವೇ ಇರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

2. 18.07.2022 ಎಂದು ದಿನಾಂಕವನ್ನು ನಮೂದಿಸಿ ಆರೋಪಿಯು ರೂ. 10,00,000/-ಗಳಿಗೆ ನನಗೆ ನೀಡಿದ ಇಕ್ವಿಟಾಸ್ ಸ್ಮಾಲ್ ಫೈನಾನ್ಸ ಬ್ಯಾಂಕ್ ಹುಬ್ಬಳ್ಳಿ ಶಾಖೆಯ ಚೆಕ್ ಸಂಖ್ಯೆಃ 001057 ಹಾಜರು ಪಡಿಸಿದ್ದು, ಅದನ್ನು ನಿಪಿ-1 ಎಂದು, ಆರೋಪಿಯ ಸಹಿಯನ್ನು ನಿಪಿ-1(ಎ) ಎಂದು, ಆರೋಪಿಯ ಖಾತೆಯಲ್ಲಿ ಎಕ್ಸಿಡ್ಸ್ ಅರೇಂಜಮೆಂಟ್ ಎಂದು ದಿನಾಂಕಃ 28.07.2022 ರಂದು ಮತ್ತು ದಿಃ 31.08.2022 ರಂದು ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ, ಶಾಖೆ ಬ್ಯಾಡಗಿ ಇವರು ನೀಡಿದ ಎರಡು ಹಿಂಬರಹಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು ನಿಪಿ-3 ಎಂದು, ಆರೋಪಿತನಿಗೆ ಹಣವನ್ನು ಮರು ಪಾವತಿಸುವಂತೆ ನನ್ನ ವಕೀಲರ ಮೂಲಕ ಆರೋಪಿಗೆ ದಿನಾಂಕಃ 12.09.2022 ರಂದು ಆರೋಪಿಗೆ ಕಳುಹಿಸಿದ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು,

ಅದನ್ನು ನಿಪಿ–4 ಎಂದು, ಸದರಿ ನೋಟಿಸನ್ನು ಕಳುಹಿಸಿದ ಬಗ್ಗೆ ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–5 ಎಂದು, ನಿಪಿ–4 ನ್ನು ಆರೋಪಿಯು ಸ್ವೀಕರಿಸಿದ ಬಗ್ಗೆ ಅಂಚೆ ಸ್ವೀಕೃತಿ ಪತ್ರವನ್ನು ನಿಪಿ-6 ಎಂದು ಗುರುತಿಸಲಾಯಿತು.

ಆರೋಪಿ ಕಲಂ 138 ಎನ್.ಐ. ಆ್ಯಕ್ಟ ಅಡಿಯಲ್ಲಿ ಅಪರಾಧವೆಸಗಿದ್ದು ಆತನ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ಶಿಕ್ಷೆ ವಿಧಿಸಬೇಕೆಂದು ನಾನು ನ್ಯಾಯಾಲಯಕ್ಕೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 200 ರಂತೆ ದೂರನ್ನು ಸಲ್ಲಿಸಿದ್ದು, ನನಗೆ ಸೂಕ್ತ ಪರಿಹಾರ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಸಹಿ/–

ಜೆಎಂಎಫ್‌ಸಿ, ಬ್ಯಾಡಗಿ.